14. ಪ್ರಾ.ಆ.ಕೇಂದ್ರ, ಕೆಂಬ್ರೋಲ	1
15. ಪ್ರಾ.ಆ. ಕೇಂದ್ರ, ಬೊಲಿಯಾರ್	1
16. ಪ್ರಾ.ಆ. ಕೇಂದ್ರ, ಮುಡಬೆಟ್ಟು	1
17. ಪ್ರಾ.ಆ. ಕೇಂದ್ರ, ಪುಡು	1
18. ಪ್ರಾ.ಆ. ಕೇಂದ್ರ, ರಾಯಿ	1
19.ಪ್ರಾ.ಆ. ಕೇಂದ್ರ, ಕಲ್ಲದಕ	1
20. ಪ್ರಾ.ಆ.ಕೇಂದ್ರ, ಕನಿಯಾನ್	1
21. ಪ್ರಾ.ಆ.ಕೇಂದ್ರ, ಶಿರಾಡ	1
22. ಪ್ರಾ.ಆ.ಕೇಂದ್ರ, ಕೋಟೆಕಾರ್	1
23. ಪ್ರಾ.ಆ. ಕೇಂದ್ರ, ಪಾಲಡ್ಕ	1
24. ಪ್ರಾ.ಆ. ಕೇಂದ್ರ, ಕೊಲ್ಲೂರು	1
25. ಪ್ರಾ. ಆ. ಕೇಂದ್ರ, ಬೈಲೂರು	1
26. ಪ್ರಾ.ಆ. ಕೇಂದ್ರ, ಅಲದಂಗಡಿ	1
27. ಪ್ರಾ.ಆ. ಕೇಂದ್ರ, ಹಕಲಡಿ	1
28. ಪ್ರಾ.ಆ. ಕೇಂದ್ರ, ಮುಂದಾಟೆ	1
29. ಪ್ರಾ.ಆ. ವೆನ್‌ಲಾಕ್ ಆಸ್ಪತ್ರೆ, ಮಂಗಳೂರು	1
ಒಟ್ಟು	31

ರಾಣೆಬೆನ್ನೂರು ತಾಲ್ಲೂಕು ತುಮ್ಮಿನಕಟ್ಟೆಯಲ್ಲಿ ಹೆಣ್ಣು ಮಕ್ಕಳ ದವಾಖಾನೆ

322 (79) ಕೆ.ಜಿ. ಕೋಳಿವಾಡ್ (ರಾಣೆಬೆನ್ನೂರು):-

ಮುಖ್ಯಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೆಬೆನ್ನೂರು ತಾಲ್ಲೂಕು ತುಮ್ಮಿನಕಟ್ಟೆಯಲ್ಲಿ ಹೆಣ್ಣು ಮಕ್ಕಳ ದವಾಖಾನೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

ಆ) ಇಲ್ಲಿಯವರೆಗೆ ಮಂಜೂರಾಗದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಇಲ್ಲ

ಆ) ಜಿಲ್ಲಾ ಪರಿಷತ್ತಿನಿಂದ ಪ್ರಸ್ತಾವನೆ ಬಂದಿರುವುದಿಲ್ಲ. ಆರ್ಥಿಕ ಅವಕಾಶ ಮಾಡಿಕೊಂಡು ಪ್ರಸ್ತಾವನೆ ಬಂದರೆ ಪರಿಶೀಲಿಸಿ, ಮಂಜೂರಾತಿಯನ್ನು ನೀಡಲಾಗುವುದು.

ರಾಜ್ಯದ ಹುಲಿ ಸಂರಕ್ಷಣಾ ಯೋಜನೆಗೆ ಖರ್ಚಾದ ಹಣ

323 (29) ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜನಗರ):-

ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹುಲಿ ಸಂರಕ್ಷಣಾ ಯೋಜನೆಗೆ ಪ್ರತಿ ವರ್ಷ ಸರಕಾರ ಖರ್ಚು ಮಾಡುವ ಹಣವೆಷ್ಟು ?